# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

**ಪಿಜಿಸಿಇಟಿ-2020 ಅಣುಕು ಸೀಟು ಹಂಚಿಕೆಯ ಬಗ್ಗೆ ವಿವರಗಳು**

- ಪಿಜಿಸಿಇಟಿ-2020 ರಲ್ಲಿ ಅಭ್ಯರ್ಥಿಗಳು ದಾಖಲಿಸಿದ ಇಚ್ಛೆ / ಆಯ್ಕೆಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ಎಂಇ / ಎಂಟೆಕ್ / ಎಂ.ಆರ್ಕ್, ಎಂ.ಸಿ.ಎ, ಎಂಬಿಎ ಕೋರ್ಸುಗಳ ಪ್ರವೇಶಾತಿಗೆ ಅಣುಕು ಸೀಟು ಹಂಚಿಕೆಯನ್ನು ಮಾಡಿ ಫಲಿತಾಂಶವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ದಿನಾಂಕ 27-12-2020 ರಂದು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.
- ಅಭ್ಯರ್ಥಿಗಳು ಫಲಿಂತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ / ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸಬಹುದಾಗಿದೆ / ಸೇರಿಸಬಹುದಾಗಿದೆ / ಅಳಿಸಬಹುದಾಗಿದೆ. ನಿಗದಿತ ಸಮಯದ ನಂತರ ಬದಲಾವಣೆಗಳನ್ನು ಮಾಡಲು ಅವಕಾಶವಿರುವುದಿಲ್ಲ. ಇಲ್ಲಿಯವರೆಗೆ ಇಚ್ಛೆ / ಆಯ್ಕೆಗಳನ್ನು ದಾಖಲಿಸದೇ ಇರುವ ಅರ್ಹ ಅಭ್ಯರ್ಥಿಗಳೂ ಸಹ ಇಚ್ಛೆ / ಆಯ್ಕೆಗಳನ್ನು ದಾಖಲಿಸಬಹುದಾಗಿದೆ.
- ಈ ಅಣಕು ಸೀಟು ಹಂಚಿಕೆ ಪ್ರಕ್ರಿಯೆಯು, ಕೇವಲ ಒಂದು ಸಾಂಕೇತಿಕ ಸ್ವರೂಪದ ಸೀಟು ಹಂಚಿಕೆ ಪ್ರಕ್ರಿಯೆ ಮಾತ್ರವಾಗಿರುತ್ತದೆ. ಆದ್ದರಿಂದ, ಅಣಕು ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಪಡೆದ ಸೀಟೇ, ಸೀಟು ಹಂಚಿಕೆಯ ವಾಸ್ತವಿಕ ಪ್ರಕ್ರಿಯೆಯಲ್ಲಿ ಸಿಗಬಹುದು ಅಥವಾ ಸಿಗದಿರಬಹುದು. ಆದರೆ, ಈ ಅಣಕು ಸೀಟು ಹಂಚಿಕೆ ಪ್ರಕ್ರಿಯೆಯು, ವಿದ್ಯಾರ್ಥಿಗಳು ಈಗಾಗಲೇ ನಮೂದಿಸಿರುವ ತಮ್ಮ ಇಚ್ಛೆಗಳನ್ನು (final options) ಪರಿಷ್ಕರಿಸಲು, ಅಪ್‌ಡೇಟ್ ಮಾಡಲು, ಸೇರಿಸಲು ಅಥವಾ ತೆಗೆದುಹಾಕಲು ಸಹಾಯ ಮಾಡುತ್ತದೆ.
- ವಿದ್ಯಾರ್ಥಿಗಳು ಯಾವ ಸೀಟು ಹಂಚಿಕೆಯಾಗಿದೆ ಎನ್ನುವುದನ್ನು ಕುರಿತು ಕ.ಪ.ಪ್ರಾದ ವೆಬ್‌ಸೈಟ್ http://kea.kar.nic.in ನಲ್ಲಿ ಪರಿಶೀಲಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಮತ್ತು ಇದರಿಂದ, ಅವರು ಇಚ್ಛೆಪಟ್ಟಲ್ಲಿ, ತಾವು ಆಯ್ಕೆ ಮಾಡಿಕೊಂಡ ಕೋರ್ಸುಗಳನ್ನು/ ಕಾಲೇಜುಗಳನ್ನು ತಮ್ಮ ಆದ್ಯತೆಗೆ ಅನುಸಾರವಾಗಿ ಬದಲಿಸುವ, ಹೊಸ ಕ್ರಮದಲ್ಲಿ ನಮೂದಿಸುವ, ತೆಗೆದು ಹಾಕುವ ಹಾಗೂ ಹೊಸದಾಗಿ ಸೇರಿಸುವ ಸ್ವಾತಂತ್ರ ಹೊಂದಿರುತ್ತಾರೆ. ಎಲ್ಲಾ ಅರ್ಹ ವಿದ್ಯಾರ್ಥಿಗಳು **ನಿಗದಿಪಡಿಸಿದ ಕೊನೆಯ ದಿನಾಂಕದ** ಒಳಗಾಗಿ ತಮ್ಮ ಕೊನೆಯ ಇಚ್ಛೆಗಳನ್ನು (final options) ನಮೂದಿಸಬೇಕು. ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ ಮುಗಿದ ನಂತರ, ಯಾರೇ ವಿದ್ಯಾರ್ಥಿಗಳು ತಮ್ಮ ಇಚ್ಛೆಗಳನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.
- ಅಲ್ಲದೆ, ಅಣಕು ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಸಹ ವಿದ್ಯಾರ್ಥಿ ತನ್ನ ಇಚ್ಛೆಗಳನ್ನು ಬದಲಾಯಿಸದೆ ಇದ್ದರೂ ಕೂಡಾ ಅಂಥ ವಿದ್ಯಾರ್ಥಿಗೆ ಅದೇ ಸೀಟು ಸಿಗದೇ ಇರಬಹುದು, ಏಕೆಂದರೆ, ಬೇರೆ ವಿದ್ಯಾರ್ಥಿಗಳು ಈ ಮೊದಲು ನಮೂದಿಸಿದ ತಮ್ಮ ಇಚ್ಛೆಗಳನ್ನು ಬದಲಾಯಿಸಬಹುದಾಗಿರುತ್ತದೆ.
- ಅಣಕು ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಯಾವುದೇ ಸೀಟು ಹಂಚಿಕೆಯಾಗಿಲ್ಲದಿರುವ ವಿದ್ಯಾರ್ಥಿಗಳು, ತಾವು ನಮೂದಿಸಿರುವ ಇಚ್ಛೆಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳುವಂತೆ ಮತ್ತು ಅವರು ತಮಗೆ ಆಸಕ್ತಿ ಇರುವ ಇಚ್ಛೆಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಮೂದಿಸುವಂತೆ ಸಲಹೆ ನೀಡಲಾಗಿದೆ.
- ಇದು ಕೇವಲ ಸಾಂಕೇತಿಕ ಸ್ವರೂಪದ ಸೀಟು ಹಂಚಿಕೆ ಕ್ರಮವಾಗಿರುತ್ತದೆ. ಆದ್ದರಿಂದ, ವಿದ್ಯಾರ್ಥಿಗಳು ಈ ಹಂಚಿಕೆ ಆಧರಿಸಿ ಯಾವುದೇ ಕಾಲೇಜಿಗೆ ದಾಖಲಾಗಲು ಆಗುವುದಿಲ್ಲ. ಆದ್ದರಿಂದ ಅವರು ಸೀಟು ಹಂಚಿಕೆಯ ನಿಜವಾದ ಫಲಿತಾಂಶ ಬರುವವರೆಗೆ ಕಾಯಬೇಕಿರುತ್ತದೆ.

27-12-2020

ಸಹಿ/-
**ಕಾರ್ಯನಿರ್ವಾಹಕ ನಿರ್ದೇಶಕರು.**

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru – 560 012.
Phone: 080-2356 4583, 2336 1786, Fax: 080-2346 1576
e-mail : keauthority-ka@nic.in Website : http://kea.kar.nic.in